# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 14.07.2020 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ರಾಣಿ ಅಬ್ಬಕ್ಕ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತ ಸದಸ್ಯರು:**

**ಅನುಪಸ್ಥಿತ ಸದಸ್ಯರು:**

## ಪ್ರಾರಂಭಿಕ

ಪ್ರಾರಂಭದಲ್ಲಿ ಮಾನ್ಯ ಕುಲಸಚಿವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಕರ್ನಾಟಕ ಸರಕಾರದ ಗೌರವಾನ್ವಿತ ರಾಜ್ಯಪಾಲರಿಂದ ಆದೇಶ ಸಂಖ್ಯೆ: ಜಿ.ಎಸ್.04 ಎಂ.ಎಲ್.ಎಂ 2020 ದಿನಾಂಕ 06.07.2020 ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಪ್ರೊ. ಕರುಣಾಕರ್ ಎ. ಕೋಟೆಗಾರ್, ಬಿಎಸ್ಸಿ, ಎಂ.ಸಿ.ಎ, ಪಿಹೆಚ್.ಡಿ ಹಾಗೂ ಶ್ರೀ ರವಿಚಂದ್ರ ಪಿ.ಎಂ. ಎಂ.ಎ. ಎಲ್.ಎಲ್.ಬಿ ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

**I ನಡವಳಿಗಳ ದೃಢೀಕರಣ:**

1. ದಿನಾಂಕ 23.06.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ:**

1. ದಿನಾಂಕ 21.05.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ವಿ.ಸ.2:1(2020): ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ಹುದ್ದೆಯ ಪ್ರಭಾರವನ್ನು ನೀಡುವ ಬಗ್ಗೆ. ಈ ನಡವಳಿಯ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಗೆ ಈ ಕೆಳಗಿನ ಹೆಚ್ಚುವರಿ ಸೇರ್ಪಡೆಯೊಂದಿಗೆ ದೃಢೀಕರಿಸಲಾಯಿತು.

   **ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ಹುದ್ದೆಗೆ(ಪ್ರಭಾರ) ಯಾರ್ಯಾರು ಅರ್ಹರಿರುತ್ತಾರೆಂದು ಸಣ್ಣ ಪಟ್ಟಿ ಮಾಡಿ(short list) ಸಿಂಡಿಕೇಟು ಸಭೆಗೆ ಮಂಡಿಸಿ ಆಯ್ಕೆ ಮಾಡುವುದು.**

2. ದಿನಾಂಕ 21.05.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ವಿ.ಸ.2:3(2020) : ಬೋಧಕೇತರ ಸಿಬ್ಬಂದಿಗಳಿಗೆ ಮುಂಭಡ್ತಿ ನೀಡಿರುವ ಬಗ್ಗೆ. ಈ ನಡವಳಿಯ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಗೆ ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

   ದಿನಾಂಕ 23.06.2020 ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ ಬೋಧಕೇತರ ಸಿಬ್ಬಂದಿಗಳಿಗೆ ಮುಂಭಡ್ತಿ ನೀಡಿರುವ ಪ್ರಸ್ತಾವನೆಯನ್ನು ಪರಿಶೀಲಿಸಲು **ಪ್ರೊ. ಡಿ. ಶಿವಲಿಂಗಯ್ಯ ಅಧ್ಯಕ್ಷರು, ಶ್ರೀ ವಿವೇಕಾನಂದ ಪನಿಯಾಳ – ಸದಸ್ಯರು, ಕುಲಸಚಿವರು – ಸದಸ್ಯ ಕಾರ್ಯದರ್ಶಿ ಇವರುಗಳನ್ನೊಳಗೊಂಡ ಸಮಿತಿ ರಚನೆ ಮಾಡುವುದು ಹಾಗೂ ಅಗತ್ಯವಿದ್ದಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾ ಅಧಿಕಾರಿಯವರನ್ನು ಸಮಿತಿ ಸಭೆಗೆ ಆಹ್ವಾನಿಸಿ ಮಾಹಿತಿ ಪಡೆಯುವುದು.**

3. ದಿನಾಂಕ 21.05.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ಇತರ ವಿಷಯಗಳಲ್ಲಿ (ಅನುಸರಣಾ ವರದಿಯ ಕ್ರಮ ಸಂಖ್ಯೆ 18 ರ) 2ನೇ ವಿಷಯ: ಮಾನ್ಯ ಸಿಂಡಿಕೇಟು

ಸದಸ್ಯರಾದ ಶ್ರೀ ರಮೇಶ್ ಕೆ., ಇವರು ಸಿ ಸಿ ಟಿ. ವಿ, ಸೋಲಾರ್ ಅಳವಡಿಕೆ ಬಗೆಗಿನ ಆಂತರಿಕ ಪರಿಶೀಲನಾ ಸಮಿತಿಯ ಮೊದಲ ಪರಿಶೀಲನಾ ಸಭೆ ದಿನಾಂಕ 13.02.2020 ರಂದು ನಡೆದಿದ್ದು, ಈ ಸಮಿತಿಗೆ ದಾಖಲೆಗಳನ್ನು ಸಮಯಕ್ಕೆ ಸರಿಯಾಗಿ ನೀಡದೆ ತಡ ಮಾಡಿದ್ದು, ಕೆಲವೊಂದು ಅಗತ್ಯ ದಾಖಲೆಗಳನ್ನು ಇನ್ನೂ ನೀಡಿರುವುದಿಲ್ಲ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು. ದಾಖಲೆಗಳನ್ನು ನೀಡದಿರುವ ಕಾರ್ಯನಿರ್ವಾಹಕರನ್ನು ಯಾಕೆ ವರ್ಗಾವಣೆಗೊಳಿಸಬಾರದಾಗಿ ತಿಳಿಸಿದರು. ದಾಖಲೆ ನೀಡದೇ ಇರುವ ಕಾರ್ಯ ನಿರ್ವಾಹಕರ ಬಗ್ಗೆ ಮಾಹಿತಿಯನ್ನು ಕುಲಸಚಿವರಿಗೆ ನೀಡುವಂತೆ ಮಾನ್ಯಕುಲಪತಿಗಳು ತಿಳಿಸಿದರು. ಈ ನಡವಳಿಯ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಗೆ ಈ ಕೆಳಗಿನ ಹೆಚ್ಚುವರಿ ಸೇರ್ಪಡೆಯೊಂದಿಗೆ ದೃಢೀಕರಿಸಲಾಯಿತು.

**ಆಂತರಿಕಾ ಪರಿಶೀಲನಾ ಸಮಿತಿಗೆ ಮಾಹಿತಿ ನೀಡದೇ ಇರುವ ಮತ್ತು ಪಿ.ಹೆಚ್‌ಡಿ ವಿದ್ಯಾರ್ಥಿಗಳ ಬಗ್ಗೆ ಮಾಹಿತಿ ನೀಡದೆ ಇರುವ ಸಂಬಂಧಪಟ್ಟ ಸಿಬ್ಬಂದಿಗಳಿಗೆ ನೋಟೀಸು ನೀಡಿ, ಸೂಕ್ತ ವಿವರಣೆಯನ್ನು ಪಡೆದು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸುವುದು.**

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಹಣಕಾಸು ಸಾ.ಸ.3:01(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2020–21ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, 2020–21ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.3:02(2020)

**ವಿಷಯ:** ವಿಶೇಷ ಅನ್ಯಕಾರ್ಯನಿಮಿತ್ತ ರಜೆ ಮಂಜೂರಾತಿ ಬಗ್ಗೆ.

**ನಿರ್ಣಯ:** ಡಾ. ಡಿ. ಶಿವಲಿಂಗಯ್ಯ ಇವರು ನ್ಯಾಕ್(NAAC) ಸಭೆಗಳಲ್ಲಿ ಭಾಗವಹಿಸಿರುವುದರಿಂದ, NAAC ಗೆ ಸಂಬಂಧಿಸಿದ ಕರ್ತವ್ಯ ನಿರ್ವಹಣೆಯು ಸರ್ಕಾರಿ ಕರ್ತವ್ಯವಾಗಿರುವುದರಿಂದ ಹೆಚ್ಚುವರಿಯಾಗಿ ಉಪಯೋಗಿಸಿರುವ 7 ದಿನಗಳ ರಜೆಯನ್ನು ವಿಶೇಷ ಅಧಿಕೃತ ಕಾರ್ಯ ನಿಮಿತ್ತ ರಜೆ ಎಂದು ಪರಿಗಣಿಸುವ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಯು ಅನುಮೋದಿಸಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ/ಪ.ಪಂ. ಘಟಕ ಸಾ.ಸ.3:03(2020)

**ವಿಷಯ:** ಶ್ರೀ. ಯೋಗೇಶ ಕೆ.ಎಂ. ಸಂಶೋಧನಾ ವಿದ್ಯಾರ್ಥಿ, ಗಣಕ ವಿಜ್ಞಾನ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಪಡೆದ ಮುಂಗಡ ಮೊತ್ತದ ಮರುಪಾವತಿ ಬಗ್ಗೆ

**ನಿರ್ಣಯ:** ಶ್ರೀ. ಯೋಗೇಶ ಕೆ.ಎಂ. ಸಂಶೋಧನಾ ವಿದ್ಯಾರ್ಥಿ, ಗಣಕ ವಿಜ್ಞಾನ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಪಡೆದ ಮುಂಗಡ ಮೊತ್ತದ ಮರುಪಾವತಿ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಖರ್ಚು ಮಾಡಿದ ಮೊತ್ತ ಮನ್ನಾ ಮಾಡಲು ಸಿಂಡಿಕೇಟು ಸಭೆಯು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ : ಸಾ.ಸ.3:04(2020)

**ವಿಷಯ:** ಪಿಹೆಚ್.ಡಿ.ಕೋರ್ಸ್‌ವರ್ಕ್ ಪರೀಕ್ಷಾ ಉತ್ತರ ಪತ್ರಿಕೆ ಮೌಲ್ಯಮಾಪನ – ಮರುಮೌಲ್ಯಮಾಪನ/ಚಾಲೆಂಜ್ ಮೌಲ್ಯಮಾಪನಕ್ಕೆ ಅನುಮತಿ ನೀಡುವ ಬಗ್ಗೆ ಶ್ರೀ ರಮೇಶ್ ಮಾದರ್ ಇವರ ಮನವಿಯ ಕುರಿತು.

**ನಿರ್ಣಯ:** ವಿನಿಯಮದ ಮಾರ್ಗಸೂಚಿಯಲ್ಲಿ ಸೂಕ್ತ ತಿದ್ದುಪಡಿ ಮಾಡುವ ಷರತ್ತಿನ ಮೇರೆಗೆ ಶ್ರೀ ರಮೇಶ್ ಮಾದರ ಇವರಿಗೆ ಪಿಹೆಚ್.ಡಿ. ಕೋರ್ಸ್‌ವರ್ಕ್ ಪರೀಕ್ಷಾ ಉತ್ತರ ಪತ್ರಿಕೆಯ ಚಾಲೆಂಜ್ ಮೌಲ್ಯಮಾಪನಕ್ಕೆ ಸಿಂಡಿಕೇಟು ಸಭೆಯು ಅನುಮೋದನೆಯನ್ನು ನೀಡಿರುತ್ತದೆ.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ :ಸಾ.ಸ.3:05(2020)

**ವಿಷಯ:** ಶ್ರೀ. ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ) ಉಜಿರೆ, ಸಂಸ್ಥೆಯನ್ನು ಪಿ.ಹೆಚ್.ಡಿ.

ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ಮಾಡುವ ಬಗ್ಗೆ

**ನಿರ್ಣಯ:** ರೆಗ್ಯುಲೇಶನ್‌ನಲ್ಲಿ ಸೂಚಿಸಿದಂತೆ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಉಜಿರೆ ಸಂಸ್ಥೆಯ ಸ್ನಾತಕೋತ್ತರ ಕೋರ್ಸ್‌ಗಳಾದ ಭೌತಶಾಸ್ತ್ರ, ರಾಸಾಯನಶಾಸ್ತ್ರ, ಸಾವಯವ ರಸಾಯನ ಶಾಸ್ತ್ರ, ಸಂಖ್ಯಾಶಾಸ್ತ್ರ, ವಾಣಿಜ್ಯಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ–ಐಬಿಎಂ, ಎಂ.ಸಿ.ಜೆ. ಅರ್ಥಶಾಸ್ತ್ರ, ಇಂಗ್ಲೀಷ್ ವಿಭಾಗಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪಿ.ಹೆಚ್.ಡಿ. ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಯು ಅನುಮೋದಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.3:06(2020)

**ವಿಷಯ:** ಗ್ರಾಮೀಣ ಬ್ಯಾಂಕಿಂಗ್ ಮತ್ತು ನಿರ್ವಹಣಾ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ ತಾತ್ಕಾಲಿಕ ನೆಲೆಯಲ್ಲಿ ಬೆರಳಚ್ಚುಗಾರ–ವ–ಗುಮಾಸ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎಂ.ಸೀತಾರಾಮ ಇವರು ತಮ್ಮ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಹೂಡಿರುವ ದಾವೆಗೆ ಸಂಬಂಧಿಸಿ, ವಿಶ್ವವಿದ್ಯಾನಿಲಯವು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ:ಡಬ್ಲ್ಯೂಎ:3659/2012(ಎಸ್–ಆರ್‌ಇಎಸ್)ದಿನಾಂಕ 23.10.2019 ರ ತೀರ್ಪಿನ ಅನುಷ್ಠಾನದ ಕುರಿತು ವಿಶ್ವವಿದ್ಯಾನಿಲಯದ ವತಿಯಿಂದ ಕಾನೂನು ಅಭಿಪ್ರಾಯ ಪಡೆದ ಬಗ್ಗೆ

**ನಿರ್ಣಯ:** ಈ ವಿಷಯವನ್ನು ಪೂರ್ವೋದಾಹರಣೆ ಎಂದು ಪರಿಗಣಿಸದೆ ವಿಶೇಷ ಪ್ರಕರಣವೆಂದು ಪರಿಗಣಿಸಿ ವಕೀಲರ ಅಭಿಪ್ರಾಯದಂತೆ ಕ್ರಮ ವಹಿಸಲು ಸಿಂಡಿಕೇಟು ಸಭೆಯು ತೀರ್ಮಾನಿಸಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ ಸಾ.ಸ.3:07(2020)

**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಮಾನ್ಯ ಸಿಂಡಿಕೇಟು ಸದಸ್ಯರು ಮತ್ತು ನಿವೃತ್ತ ಪ್ರಾಂಶುಪಾಲರು, ಫೀ.ಮಾ.ಕೆ.ಎಂ. ಕಾರ್ಯಪ್ಪ ಕಾಲೇಜು ಮಡಿಕೇರಿ ಇವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ: 40800/2017ಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಮಂಡಿಸಲಾಗಿರುವ ಆಕ್ಷೇಪಣಾ ಹೇಳಿಕೆಗಳನ್ನು ಹಿಂಪಡೆಯುವ ಬಗ್ಗೆ.

**ನಿರ್ಣಯ:** ಡಾ. ಪಾರ್ವತಿ ಅಪ್ಪಯ್ಯ, ಮಾನ್ಯ ಸಿಂಡಿಕೇಟು ಸದಸ್ಯರು ಮತ್ತು ನಿವೃತ್ತ ಪ್ರಾಂಶುಪಾಲರು, ಫೀ.ಮಾ.ಕೆ.ಎಂ. ಕಾರ್ಯಪ್ಪ ಕಾಲೇಜು ಮಡಿಕೇರಿ ಇವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ: 40800/2017ಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಮಂಡಿಸಲಾಗಿರುವ ಆಕ್ಷೇಪಣಾ ಹೇಳಿಕೆಗಳನ್ನು ಹಿಂಪಡೆಯುವ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಯು ಅನುಮೋದಿಸಿತು ಹಾಗೂ ಇದಕ್ಕೆ ಕಾರಣಕರ್ತರಾದ ಅಧಿಕಾರಿಯನ್ನು ಗುರುತಿಸಿ ಶೋಕಾಸ್ ನೋಟೀಸು ನೀಡಲು ಸಿಂಡಿಕೇಟು ಸಭೆಯು ಸೂಚಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ :ಸಾ.ಸ.3:08(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಮತ್ತು ಆರ್ಥಿಕ ಶಿಸ್ತು ಪಾಲನೆಯ ಹಿನ್ನೆಲೆಯಲ್ಲಿ ಪ್ರಸ್ತುತ ತಾತ್ಕಾಲಿಕ ಹಾಗೂ ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಸರ್ಕಾರದ ನಿಯಮಗಳನ್ನು ಪಾಲಿಸಿ ಬಳಸಿಕೊಳ್ಳುವ ಕುರಿತು.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಮತ್ತು ಆರ್ಥಿಕ ಶಿಸ್ತು ಪಾಲನೆಯ ಹಿನ್ನೆಲೆಯಲ್ಲಿ ಪ್ರಸ್ತುತ ತಾತ್ಕಾಲಿಕ ಹಾಗೂ ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಸರ್ಕಾರದ ನಿಯಮಗಳನ್ನು ಪಾಲಿಸಿ ಬಳಸಿಕೊಳ್ಳುವ ಕುರಿತ 1ನೇ ವಿಚಾರಕ್ಕೆ ಸಂಬಂಧಿಸಿ ಘಟನೋತ್ತರ ಮಂಜೂರಾತಿ ನೀಡಲಾಯಿತು.

- ಮುಂದುವರಿದು ಹೊರಗುತ್ತಿಗೆ ಸಂಸ್ಥೆಯಿಂದ ಬ್ಯಾಂಕ್ ಗ್ಯಾರಂಟಿ, ಕಾರ್ಯಕ್ಷಮತೆ ಗ್ಯಾರಂಟಿಯನ್ನು ಪಡೆದುಕೊಳ್ಳುವುದು.
- ಹುದ್ದೆಯನ್ನು ಖಾಯಂ ಮಾಡುವಂತೆ ಕೋರಲು ಯಾವುದೇ ಹಕ್ಕು ಇರುವುದಿಲ್ಲ ಎಂಬ ಷರತ್ತನ್ನು ಒಪ್ಪಿಕೊಂಡು ಹುದ್ದೆಯನ್ನು ಸ್ವೀಕರಿಸುತ್ತೇನೆಂದು ಸಂಬಂಧಪಟ್ಟ ಸಿಬ್ಬಂದಿಯಿಂದ ಸಹಿ ಪಡೆಯುವುದು.
- ಕಾರ್ಮಿಕ ಕಾನೂನು ತಜ್ಞರ ಸಲಹೆ ಪಡೆದು, ಸರಕಾರಕ್ಕೆ ಈ ಬಗ್ಗೆ ಪತ್ರ ಬರೆಯಬೇಕೆಂದು ಸಭೆಯು ತೀರ್ಮಾನಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.3:09(2020)

**ವಿಷಯ:** ಶ್ರೀ. ರಮೇಶ ಕೆ. ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾಪನೆ ಬಗ್ಗೆ

**ನಿರ್ಣಯ:** **1.** ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸರ್ಕಾರಿ, ಘಟಕ ಕಾಲೇಜು, ಅನುದಾನಿತ ಕಾಲೇಜು ಮತ್ತು ಅನುದಾನ ರಹಿತ ಕಾಲೇಜುಗಳಿಗೆ ಪ್ರಥಮ ವರ್ಷದ ಪ್ರವೇಶಾತಿಯನ್ನು ಕೇಂದ್ರಿಕೃತ ಪ್ರವೇಶಾತಿಯ ಮೂಲಕ ಪ್ರಾರಂಭಿಸುವ ಕುರಿತು : **ಕೋವಿಡ್–19 ಹಿನ್ನೆಲೆಯಲ್ಲಿ 2021–2022 ನೇ ವರ್ಷದಲ್ಲಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಬಹುದು ಎಂದು ಸಭೆಯು ತೀರ್ಮಾನಿಸಿತು.**

2. ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆ ಫಲಿತಾಂಶ ಹಾಗೂ ಅಂಕಪಟ್ಟಿ ವಿತರಣೆಯನ್ನು ಯಾವುದೇ ಹೊರಗುತ್ತಿಗೆ ಸಂಸ್ಥೆಗಳಿಗೆ ನೀಡದೆ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಿಂದಲೇ ನಡೆಸುವ ಕುರಿತು : **ಪರೀಕ್ಷಾ ಸುಧಾರಣೆಯ ಕುರಿತು ಚರ್ಚಿಸಲು ವಿಶೇಷ ಸಿಂಡಿಕೇಟು ಸಭೆಯನ್ನು ಕರೆಯಲು ತೀರ್ಮಾನಿಸಲಾಯಿತು**

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.3:10(2020)

**ವಿಷಯ:** ಶ್ರೀ ಹೆಚ್. ವಿಜಯರಾಜ್, ಹಿರಿಯ ಸಹಾಯಕರು, ಕುಲಸಚಿವರು(ಪರೀಕ್ಷಾಂಗ) ಕಚೇರಿ ಇವರ ವೈದ್ಯಕೀಯ ಚಿಕಿತ್ಸೆಗೆ ಮುಂಗಡ ಮಂಜೂರಾತಿ ಬಗ್ಗೆ.

**ನಿರ್ಣಯ:** ಶ್ರೀ ಹೆಚ್. ವಿಜಯರಾಜ್, ಹಿರಿಯ ಸಹಾಯಕರು, ಕುಲಸಚಿವರು(ಪರೀಕ್ಷಾಂಗ) ಕಚೇರಿ ಇವರಿಗೆ 2ನೇ ಬಾರಿ ಚಿಕಿತ್ಸೆಗೆ ರೂ. 2,00,000/– ಮುಂಗಡ ಮಂಜೂರು ಮಾಡಿರುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು ಹಾಗೂ ಶಿಕ್ಷಕೇತರ ಸಿಬ್ಬಂದಿಗಳಿಗೆ ವಿಮಾ ಪಾಲಿಸಿಯನ್ನು ಅಗತ್ಯವಾಗಿ ಮಾಡುವಂತೆ ಸಿಂಡಿಕೇಟು ಸಭೆಯು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ: ಸಾ.ಸ.3:11(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ– ನಾಟೆಕಲ್‌ನಲ್ಲಿರುವ A S K Towers ನ 12 ಫ್ಲಾಟ್‌ಗಳನ್ನು ಪರವಾನಗಿ ಶುಲ್ಕದ ಆಧಾರದ (ಲೈಸೆನ್ಸ್ ಫೀ) ನೆಲೆಯಲ್ಲಿ ತೆಗೆದುಕೊಳ್ಳುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ– ನಾಟೆಕಲ್‌ನಲ್ಲಿರುವ A S K Towers ನ ಪ್ರಸ್ತುತ ಅಗತ್ಯವಿರುವ ಸಂಖ್ಯೆಯ ಫ್ಲಾಟ್‌ಗಳನ್ನು ಮಾತ್ರ ಪರವಾನಗಿ ಶುಲ್ಕದ ಆಧಾರದ (ಲೈಸೆನ್ಸ್ ಫೀ) ನೆಲೆಯಲ್ಲಿ ತೆಗೆದುಕೊಳ್ಳುವ ಬಗ್ಗೆ ಗುತ್ತಿಗೆ ನಿಯಮಗಳು ಮತ್ತು ಷರತ್ತುಗಳನ್ನು (lease terms and condition) ಪರಿಷ್ಕರಿಸಬೇಕು. ಕಾನೂನು ಸಲಹೆ ಪಡೆದು ಹೊಸ ಒಪ್ಪಂದ ಮಾಡುವುದು ಹಾಗೂ ಎಲ್ಲಾ ಶಾಸನಾತ್ಮಕವಾದ ಅಗತ್ಯತೆಗಳನ್ನು ಪಾಲಿಸತಕ್ಕದ್ದು ಎಂದು ಸಿಂಡಿಕೇಟು ಸಭೆಯು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಶೈಕ್ಷಣಿಕ:ಸಾ.ಸ.3:12(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Bachelor in Audiology and speech Language Pathology(B.ASLP) ಕಾರ್ಯಕ್ರಮವನ್ನು ಮುಂದುವರಿಸುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Bachelor in Audiology and speech Language Pathology(B.ASLP) ಕಾರ್ಯಕ್ರಮವನ್ನು ಮುಂದುವರಿಸುವ ಬಗ್ಗೆ ಮಾನ್ಯ ರಾಜ್ಯಪಾಲರಿಗೆ ಮತ್ತು ಸರಕಾರಕ್ಕೆ ಪತ್ರ ಬರೆಯಲು ಸಭೆಯು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.3:13(2020)

**ವಿಷಯ:** ಪದವಿ ಮಟ್ಟದ ಆಧುನಿಕ ಯುರೋಪಿಯನ್ ಲ್ಯಾಂಗ್ವೇಜ್ (Modern European Language) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಆಧುನಿಕ ಯುರೋಪಿಯನ್ ಲ್ಯಾಂಗ್ವೇಜ್ (Modern European Language) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.3:14(2020)

**ವಿಷಯ:** ದಿನಾಂಕ 01.01.2016 ರ ಪರಿಷ್ಕೃತ ಯುಜಿಸಿ 7ನೇ ವೇತನ ಶ್ರೇಣಿ/ಸಂಬಂಧಿಸಿದ ಆದೇಶಗಳನ್ವಯ ಪರಿಷ್ಕೃತ ವೇತನ ಶ್ರೇಣಿಯ ವಿವಿಧ ಸೌಲಭ್ಯಗಳನ್ನು ವಿಸ್ತರಿಸಲು ರಚಿಸಿದ ಕರಡು ಪರಿನಿಯಮ /ಅನುಶಾಸನವನ್ನು ತಿದ್ದುಪಡಿ ಮಾಡಿ ಅನುಮೋದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 01.01.2016 ರ ಪರಿಷ್ಕೃತ ಯುಜಿಸಿ 7ನೇ ವೇತನ ಶ್ರೇಣಿ/ಸಂಬಂಧಿಸಿದ ಆದೇಶಗಳನ್ವಯ ಪರಿಷ್ಕೃತ ವೇತನ ಶ್ರೇಣಿಯ ವಿವಿಧ ಸೌಲಭ್ಯಗಳನ್ನು ವಿಸ್ತರಿಸಲು ರಚಿಸಿದ

ಕರಡು ಪರಿನಿಯಮ/ಅನುಶಾಸನವನ್ನು ತಿದ್ದುಪಡಿ ಮಾಡಿ ಸರಕಾರಕ್ಕೆ ಮರುಸಲ್ಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.3:15(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳ(ಆಡಳಿತ, ಲಿಪಿಕ ಮತ್ತು ಇನ್ನಿತರ ಬೋಧಕೇತರ ಹುದ್ದೆಗಳ) ವೃಂದ ಮತ್ತು ನೇಮಕಾತಿ ನಿಯಮಗಳ ಕ್ರೋಢಿಕೃತ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಈ ಬಗ್ಗೆ ಚರ್ಚೆಯ ಅಗತ್ಯತೆಯಿರುವುದರಿಂದ ಹಾಗೂ ಕಾಲಾವಕಾಶ ಬೇಕಾಗಿರುವ ಕಾರಣ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ :ಸಾ.ಸ.3:16(2020)

**ವಿಷಯ:** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಸ್ನಾತಕೋತ್ತರ ಭೌತಶಾಸ್ತ್ರ(M.Sc-Physics) ಕೋರ್ಸಿನ ಸಂಯೋಜಕರ ಬದಲಾವಣೆ ಬಗ್ಗೆ.

**ನಿರ್ಣಯ:** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಸ್ನಾತಕೋತ್ತರ ಭೌತಶಾಸ್ತ್ರ(M.Sc-Physics) ಕೋರ್ಸಿನ ಸಂಯೋಜಕರ ಬದಲಾವಣೆ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಯು ಅನುಮೋದಿಸಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ :ಸಾ.ಸ.3:17(2020)

**ವಿಷಯ:** ಪರೀಕ್ಷಾ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಹೊಸ ನಿಯಮಾವಳಿಯನ್ನು ತಯಾರಿಸಲು ಸಮಿತಿ ರಚನೆ ಬಗ್ಗೆ.

**ನಿರ್ಣಯ:** ತನಿಖಾ ನಿಯಮಾವಳಿಯನ್ನು ಒಳಗೊಂಡಂತೆ ಪರೀಕ್ಷಾ ಕೈಪಿಡಿಯಲ್ಲಿ ಸೂಕ್ತ ತಿದ್ದುಪಡಿಯನ್ನು ತರಲು ಕುಲಪತಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ :ಸಾ.ಸ.3:18(2020)

**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ರವೀಂದ್ರ ಕಲಾಭವನದ ಸೆಮಿನಾರ್ ಕೊಠಡಿಗಳಿಗೆ ಪೀಠೋಪಕರಣ ಖರೀದಿ ಕುರಿತು.

**ನಿರ್ಣಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ರವೀಂದ್ರ ಕಲಾಭವನದ ಸೆಮಿನಾರ್ ಕೊಠಡಿಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು M/s Vinith V. Sherlekar(Veenu Ladder) ಇವರಿಂದ ಸಂಧಾನದ ನಂತರದ ಒಟ್ಟು ಮೊತ್ತ ರೂ. 12,90,293/-(ತೆರಿಗೆ ಸೇರಿ)ರಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಯು ಅನುಮೋದಿಸಿತು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪೀಠೋಪಕರಣಗಳನ್ನು ಖರೀದಿಸಲು 'ಧಾರಣಾಗುತ್ತಿಗೆ' ಇರುವಾಗ ಬೇರೆಯೇ ಟೆಂಡರ್ ಕರೆಯಲು ಪರಾಮರ್ಶಿಸದೆ ಅನುಮತಿ ನೀಡುವಲ್ಲಿ ಲೋಪ ಎಸಗಲು ಕಾರಣಕರ್ತರಾದ ಎಲ್ಲರನ್ನೂ ಗುರುತಿಸಿ ಎಚ್ಚರಿಕೆ ನೀಡಿ ಮುಂದಕ್ಕೆ ಪುನರಾವರ್ತನೆ ಆದರೆ ಶಿಸ್ತುಕ್ರಮ ಜರಗಿಸಲಾಗುವುದೆಂದು ಸಂಬಂಧಪಟ್ಟವರಿಗೆ ತಿಳಿಸುವಂತೆ ಸಭೆಯು ನಿರ್ಣಯಿಸಿತು

**ಕಾರ್ಯಸೂಚಿ ಸಂಖ್ಯೆ:** ಆಡಳಿತ :ಸಾ.ಸ.3:19(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಚೇರಿಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಧಾರಣಾ ಗುತ್ತಿಗೆ ದರದಲ್ಲಿ ಖರೀದಿಸುವ ಕುರಿತು.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಚೇರಿಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು M/s Neeal Sales & service, Mangalore ಇವರಿಂದ ಸಂಧಾನದ ನಂತರದ ಒಟ್ಟು ಮೊತ್ತ ರೂ. 1,08,92,165/- ದರದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಯು ನಿರ್ಣಯಿಸಿತು. ಧಾರಣಾ ಗುತ್ತಿಗೆ ಆಧಾರದಲ್ಲಿ ಖರೀದಿಸುವುದು ಸರಿಯಲ್ಲ ಎಂಬ ಅಭಿಪ್ರಾಯವನ್ನು ಕುಲಸಚಿವರು ವ್ಯಕ್ತಪಡಿಸಿರುವುದನ್ನು ದಾಖಲಿಸಲು ಸಿಂಡಿಕೇಟು ಸಭೆಯು ಒಪ್ಪಿಗೆಯನ್ನು ಸೂಚಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.3:20(2020)

**ವಿಷಯ:** ಡಾ. ನಾಗಪ್ಪಗೌಡ ಆರ್. ಸಹಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಇವರು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಯ ಕನ್ನಡ ಸ್ನಾತಕೋತ್ತರ ಕೋರ್ಸಿಗೆ ನಿಯೋಜನೆ ಮಾಡಬೇಕೆಂದು ಕೋರಿ ನೀಡಿರುವ ಮನವಿಯ ಬಗ್ಗೆ.

**ನಿರ್ಣಯ:** ಡಾ. ನಾಗಪ್ಪಗೌಡ ಆರ್. ಸಹಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಇವರು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಯ ಕನ್ನಡ ಸ್ನಾತಕೋತ್ತರ ಕೋರ್ಸಿಗೆ ನಿಯೋಜನೆ ಮಾಡಬೇಕೆಂದು ಕೋರಿ ನೀಡಿರುವ ಮನವಿಯ ಬಗ್ಗೆ ಚರ್ಚಿಸಲು ಕಾಲಾವಕಾಶ ಬೇಕಾಗಿರುವ ಕಾರಣ ಮುಂದೂಡಲಾಯಿತು.

**IV ಇತರ ವಿಷಯಗಳು**

1. ಶಿಕ್ಷಕ/ಶಿಕ್ಷಕೇತರ ವರ್ಗಾವಣೆ/ನಿಯೋಜನೆ ಸಮಿತಿಗೆ ಡಾ. ಪಾರ್ವತಿ ಅಪ್ಪಯ್ಯ ಇವರನ್ನು ವಿಶೇಷ ನೆಲೆಯಲ್ಲಿ ಸೇರ್ಪಡೆಗೊಳಿಸುವುದು.
2. ಸರ್ಕಾರದ ನಿರ್ದೇಶನವನ್ನು ಪಾಲಿಸುವ ಷರತ್ತಿಗೊಳಪಟ್ಟು ಪದವಿ ತರಗತಿಗಳ ಆನ್‌ಲೈನ್ ಪ್ರವೇಶಾತಿಯನ್ನು ಪ್ರಾರಂಭಿಸಲು ಸಿಂಡಿಕೇಟು ಸಭೆಯು ನಿರ್ಣಯಿಸಿತು.
3. ಕಾನೂನು ಘಟಕವನ್ನು ಪುನರ್‌ರಚಿಸುವಂತೆ ಸಿಂಡಿಕೇಟು ಸಭೆಯು ಸೂಚಿಸಿತು.
4. ಇಲಾಖಾ ವಿಚಾರಣೆಯ ಬಗ್ಗೆ ವಿಶೇಷ ಸಿಂಡಿಕೇಟು ಸಭೆಯಲ್ಲಿ ಅಧ್ಯಯನ ಮಾಡಿ ಸರಿಯಾದ ನಿರ್ಧಾರ ಕೈಗೊಳ್ಳಲು ಸಿಂಡಿಕೇಟು ಸಭೆಯು ನಿರ್ಣಯಿಸಿತು.
5. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಿನ 150ನೇ ವರ್ಷಾಚರಣೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಲೆಕ್ಕಾಚಾರ ಬಾರದೆ ಇರುವುದರಿಂದ ಹಣಕಾಸು ಅಧಿಕಾರಿಯವರು ಸಂಬಂಧಿತರಿಗೆ ನೋಟೀಸು ನೀಡುವಂತೆ ಸಿಂಡಿಕೇಟು ಸಭೆಯು ಸೂಚಿಸಿತು.
6. ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಎಂ.ಎಸ್. ತಳವಾರ್ ಇವರು ಬಜೆಟ್‌ನಲ್ಲಿ ಲೆಕ್ಕವಿಲ್ಲದ(unaccounted) ಅಥವಾ ಹಕ್ಕು ಪಡೆಯದ(unclaimed) ಹಣವಿದ್ದಲ್ಲಿ, ಕೋವಿಡ್ – 19 ಹಿನ್ನೆಲೆಯಲ್ಲಿ ಅನಿರೀಕ್ಷಿತ ಆದಾಯ ಮೊಟಕುಗೊಳ್ಳುವ ಸಂದರ್ಭದಲ್ಲಿ ಬಳಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯ ಪಟ್ಟರು.
7. E- Governance ನಿರ್ವಹಣೆ ಬಗ್ಗೆ ಸಂಬಂಧಪಟ್ಟ ಕಂಪನಿಯಿಂದ ಪ್ರಸ್ತುತ ಪಡಿಸಲು ವಿಶೇಷ ಸಿಂಡಿಕೇಟು ಸಭೆ ಕರೆಯುವುದಾಗಿ ಮಾನ್ಯ ಕುಲಪತಿಗಳು ತಿಳಿಸಿದರು.
8. 01.04.2012 ರಿಂದ 31.12.2015 ರ ಅವಧಿಯಲ್ಲಿ ನಿವೃತ್ತಿ ಗೊಂಡ ಬೋಧಕ ಸಿಬ್ಬಂದಿಗಳಿಗೆ ಹೆಚ್ಚುವರಿ ಪಾವತಿಸಿರುವ ಪರಿವರ್ತಿತ ಪಿಂಚಣಿ(Commutation)ಮೊತ್ತವನ್ನು ಜುಲೈ 2020 ರಿಂದ ನಿವೃತ್ತಿ ವೇತನದಿಂದ ಕಟಾಯಿಸುವ ಬಗ್ಗೆ. (Corrigendum (FD-spl) 113 PEN 2012 Bengaluru dated 11.03.2020)

   ಸರಕಾರದಿಂದ ವಿವರಣೆ ಕೇಳಿ ಪತ್ರ ಬರೆದು, ಕೆಎಸ್‌ಯು ಆಕ್ಟ್ 2000 ಸೆಕ್ಷನ್ 29 ರ ಪ್ರಕಾರ ಸರಕಾರದಿಂದ ವಿವರಣೆ ಬರುವವರೆಗೆ ಯಾವುದೇ ಕ್ರಮ ಕೈಗೊಳ್ಳುವಂತಿಲ್ಲ. ಸಂಬಂಧಪಟ್ಟ ಸಿಬ್ಬಂದಿಯವರಿಂದ ಮುಂದಿನ ದಿನಗಳಲ್ಲಿ ಲೆಕ್ಕ ಪರಿಶೋಧನೆ ಆಕ್ಷೇಪಣೆ ಬಂದಲ್ಲಿ ವಸೂಲಾತಿಗೆ ಬದ್ಧರಾಗಿರುತ್ತೇವೆಂದು ಮುಚ್ಚಳಿಕೆ ಪತ್ರ ತೆಗೆದುಕೊಳ್ಳಲು ಸಿಂಡಿಕೇಟು ಸಭೆಯು ಸೂಚಿಸಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |